# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s Ravindra Energy KNSP1 Private Limited ಕಂಪನಿಗೆ ವಿಜಯಪುರ ಜಿಲ್ಲೆ, ತಿಕೋಟ ತಾಲ್ಲೂಕಿನ ಹೊನ್ನವಾಡ ಗ್ರಾಮದಲ್ಲಿ 50 ಮೆ.ವ್ಯಾ (34 ಮೆ.ವ್ಯಾ ಪವನ + 16 ಮೆ.ವ್ಯಾ ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಪಾರ್ಕ್ ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :**

1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/ 08 / REKNSP1PL - 50 MW (34 W + 16 S)/Honawad/ F-26/2023/0720, ದಿನಾಂಕ:03.03.2023.
2) ದಿನಾಂಕ:04.03.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡಾವಳಿ.
3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರ.ಸಂ. (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Ravindra Energy KNSP1 Private Limited ಕಂಪನಿಗೆ ವಿಜಯಪುರ ಜಿಲ್ಲೆ, ತಿಕೋಟ ತಾಲ್ಲೂಕಿನ ಹೊನ್ನವಾಡ ಗ್ರಾಮದಲ್ಲಿ 50 ಮೆ.ವ್ಯಾ (34 ಮೆ.ವ್ಯಾ ಪವನ + 16 ಮೆ.ವ್ಯಾ ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಪಾರ್ಕ್ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್.ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆಗೆ/ಸಮೂಹ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 05 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, M/s Ravindra Energy KNSP1 Private Limited ಇವರು ಹಂಚಿಕೆಗಾಗಿ ಕೋರಿರುವ ಸ್ಥಳವು M/s Gothe Renewable Energy Private Limited ಕಂಪನಿಗೆ ಹಂಚಿಕೆಯಾಗಿರುವ 40 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳದ ಮೇಲೆ ಬರುತ್ತದೆ. ಸದರಿ ಯೋಜನೆಯ ಅನುಷ್ಠಾನಕ್ಕೆ ನೀಡಿರುವ ಕಾಲಾವಧಿಯು ದಿನಾಂಕ:31.03.2023ಕ್ಕೆ ಮುಕ್ತಾಯಗೊಂಡಿರುತ್ತದೆ. ಆದರೆ ಸದರಿಯವರು ಇದುವರೆವಿಗೂ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ಪ್ರಗತಿಯನ್ನು ಸಾಧಿಸಿರುವುದಿಲ್ಲ ಹಾಗೂ M/s Gothe Renewable Energy Private Limited ಕಂಪನಿಗೆ ಹಂಚಿಕೆಯಾಗಿರುವ 40 ಮೆ.ವ್ಯಾ. ಸಾಮರ್ಥ್ಯಕ್ಕೆ 20 ವಿಂಡ್ ಟರ್ಬೈನ್‌ಗಳಿಗೆ (2 ಮೆ.ವ್ಯಾ. ಸಾಮರ್ಥ್ಯ) ಪ್ರತಿ ವಿಂಡ್ ಟರ್ಬೈನ್‌ಗೆ 05 ಎಕರೆಯಂತೆ ಪರಿಗಣಿಸಿ, ಅಳವಡಿಸುವ ವಿಂಡ್ ಟರ್ಬೈನ್‌ಗಳಿಗೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಲು ಅಭಿವೃದ್ಧಿದಾರರಿಗೆ ತಿಳಿಸಲಾಗಿದೆ. ಸದರಿ ಕಂಪನಿಗೆ ಹಂಚಿಕೆಯಾಗಿರುವ 40 ಮೆ.ವ್ಯಾ. ಸಾಮರ್ಥ್ಯಕ್ಕೆ ಪ್ರತಿ ವಿಂಡ್ ಟರ್ಬೈನ್‌ಗೆ 5 ಎಕರೆಯಂತೆ ಒಟ್ಟು 20 ವಿಂಡ್ ಟರ್ಬೈನ್‌ಗಳಿಗೆ 100 ಎಕರೆ ಜಮೀನನ್ನು ಹೊರತುಪಡಿಸಿ, ಬಾಕಿ ಉಳಿದ ಜಮೀನಿನಲ್ಲಿ M/s Ravindra Energy KNSP1 Private Limited ಕಂಪನಿಯವರು 34 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ 10 ವಿಂಡ್ ಟರ್ಬೈನ್‌ಗಳನ್ನು (3400 ಕಿ.ವ್ಯಾ ಸಾಮರ್ಥ್ಯ) ಅಳವಡಿಸುತ್ತಿದ್ದು, ಪ್ರತಿ ವಿಂಡ್ ಟರ್ಬೈನ್‌ಗೆ 10 ಎಕರೆಯಂತೆ ಲೆಕ್ಕೀಕರಿಸಿ, ಒಟ್ಟು 100 ಎಕರೆ (10 Nos WTG X 10 Acres = 100 Acres) ಜಮೀನನ್ನು ಟೋಪೋಶೀಟ್ ಸಂಖ್ಯೆ: 47 P/5 ರಲ್ಲಿ

....2